# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 853 |
| ಸದಸ್ಯರ ಹೆಸರು | : | ಶ್ರೀ ಕಾಂತರಾಜ್ (ಬಿಎಂಎಲ್) |
| ಉತ್ತರಿಸುವ ದಿನಾಂಕ | : | 15/12/2020 |
| ಉತ್ತರಿಸುವ ಸಚಿವರು | : | ಮಾನ್ಯ ಪೌರಾಡಳಿತ, ತೋಟಗಾರಿಕೆ ಹಾಗೂ ರೇಷ್ಮೆ ಸಚಿವರು. |

| ಕ್ರ.ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| (ಅ) | ತುಮಕೂರು ಜಿಲ್ಲೆ ಗುಬ್ಬಿ ಪಟ್ಟಣ ಪಂಚಾಯಿತಿ ಎಷ್ಟು ಜನಸಂಖ್ಯೆಯನ್ನು ಹೊಂದಿದೆ. ವಾರ್ಡ್‌ಗಳ ಸಂಖ್ಯೆ ಎಷ್ಟು? ಪಟ್ಟಣ ಪಂಚಾಯಿತಿಯ ಸರಹದ್ದು ಎಲ್ಲಿಯವರೆಗೆ ಇದೆ (ವಿವರವಾದ ಮಾಹಿತಿ ನೀಡುವುದು) | 2011ರ ಜನಗಣತಿಯ ಪ್ರಕಾರ ಗುಬ್ಬಿ ಪಟ್ಟಣದ ಜನಸಂಖ್ಯೆ: 18,446 ಇರುತ್ತದೆ.<br>ಗುಬ್ಬಿ ಪಟ್ಟಣ ಪಂಚಾಯಿತಿಯು ಒಟ್ಟು 19 ವಾರ್ಡ್‌ಗಳನ್ನು ಹೊಂದಿದೆ.<br>ಗುಬ್ಬಿ ಪಟ್ಟಣ ಪಂಚಾಯಿತಿಯ ಸರಹದ್ದು<br>**ಪೂರ್ವಕ್ಕೆ:** ಬಿದ್ಯಾಂಜನೇಯಸ್ವಾಮಿ ದೇವಸ್ಥಾನ<br>**ಪಶ್ಚಿಮಕ್ಕೆ:** ನಿಟ್ಟೂರ್‌ಗೇಟ್<br>**ಉತ್ತರಕ್ಕೆ:** ರೈಲ್ವೆ ಹಳಿ<br>**ದಕ್ಷಿಣಕ್ಕೆ:** ಗದ್ದೆಬಯಲು<br>ಗುಬ್ಬಿ ಪಟ್ಟಣ ಪಂಚಾಯಿತಿಯ ಪ್ರದೇಶದ ಎಲ್ಲೆಯ ವಿವರವನ್ನು ಅನುಬಂಧ -1ರಲ್ಲಿ ಒದಗಿಸಲಾಗಿದೆ. |
| (ಆ) | ಗುಬ್ಬಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಮಾರನಕಟ್ಟೆ ಕೆರೆ ಇದೆಯೇ? ಹಾಗಿದ್ದಲ್ಲಿ ಇದರ ವಿಸ್ತೀರ್ಣವೆಷ್ಟು? ಇದಕ್ಕೆ ಮಾಲೀಕರು ಯಾರು (ವಿವರವಾದ ಮಾಹಿತಿ ನೀಡಿವುದು) | ಗುಬ್ಬಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಮಾರನಕಟ್ಟೆ ಕೆರೆ ಇದೆ.<br>ಜಾಗದ ವಿಸ್ತೀರ್ಣ 46.00 ಎಕರೆ ಇದೆ.<br>ಮಾಲೀಕರು: ಪಟ್ಟಣ ಪಂಚಾಯಿತಿ, ಗುಬ್ಬಿ. |
| (ಇ) | ಸದರಿ ಮಾರನಕಟ್ಟೆ ಕೆರೆ ಜಾಗವನ್ನು ಸರ್ಕಾರವು ಯಾವ ಯಾವ ಸಂಘ ಸಂಸ್ಥೆಗಳಿಗೆ ಗುತ್ತಿಗೆ/ಕ್ರಯಕ್ಕೆ ನೀಡಿರುತ್ತದೆ (ವಿವರವಾಗಿ ಸಂಸ್ಥೆಯ ಹೆಸರು, ಗುತ್ತಿಗೆ/ಕ್ರಯ ನೀಡಿದ ವರ್ಷ ಹಾಗೂ ವಿಸ್ತೀರ್ಣದೊಂದಿಗೆ ಸರ್ಕಾರಿ ಆದೇಶ ಪ್ರತಿಯೊಂದಿಗೆ ವಿವರವಾದ ಮಾಹಿತಿ ನೀಡುವುದು) | ವಿವಿಧ ಸಂಘ-ಸಂಸ್ಥೆಗಳಿಗೆ ನೀಡಿರುವ ಮಾಹಿತಿಯ ಪಟ್ಟಿಯನ್ನು ಅನುಬಂಧ-2 ರಲ್ಲಿ ಒದಗಿಸಲಾಗಿದೆ.<br>ಸರ್ಕಾರದ ಆದೇಶ ಸಂಖ್ಯೆ:ನಅಇ 102 ಟಿಎಂಡಿ 98 ಬೆಂಗಳೂರು ದಿನಾಂಕ 11/09/1998 ರಂತೆ ನಿವೇಶನ ಮಂಜೂರು ಮಾಡಲಾಗಿರುತ್ತದೆ. |

| | | |
|---|---|---|
| (ಈ) | ಇದರಲ್ಲಿ ಖಾಲಿ ಉಳಿದಿರುವ ಜಾಗ ಎಷ್ಟು? ಇದನ್ನು ಸರ್ಕಾರ ಯಾವ ಉದ್ದೇಶಕ್ಕೆ ಬಳಸಲು ಉದ್ದೇಶಿಸಿದೆ? | ಖಾಲಿ ಉಳಿದಿರುವ ಜಾಗ ಸುಮಾರು 25-00 ಎಕರೆ ಖಾಲಿ ಜಾಗ ಇರುತ್ತದೆ. ಉಳಿಕೆ ಜಮೀನು ಅವಶ್ಯಕತೆಗನುಗುಣವಾಗಿ ಬಳಕೆ ಮಾಡಲು ನಿಯಮಾನುಸಾರ ಕ್ರಮವಹಿಸಲಾಗುವುದು. |

ಸಂಖ್ಯೆ: ನಅಇ/43/ಎಲ್‌ಸಿಕ್ಯೂ/2020

**(ನಾರಾಯಣ ಗೌಡ)**
ಮಾನ್ಯ ಪೌರಾಡಳಿತ, ತೋಟಗಾರಿಕೆ
ಹಾಗೂ ರೇಷ್ಮೆ ಸಚಿವರು